OS No. 29/2021

DW-1

**(ಇಂದು ದಿಃ 22-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**ಪಾಟೀ ಸವಾಲುಃ- ವಾದಿ ಪರ ಶ್ರೀ.RI ವಕೀಲರಿಂದಃ-**

ನನ್ನ ಗಂಡನ ಹೆಸರು ಹನುಮಂತು ಎಂದರೆ ಸರಿ. ಹನುಮಂತು ನ ತಂದೆ ಹೆಸರು ಚಂದ್ರಪ್ಪ ಎಂದರೆ ಸರಿ. ಚಂದ್ರಪ್ಪ ನ ತಂದೆ ಹೆಸರು ಬಾಲಪ್ಪ ಎಂದರೆ ಸರಿ. ಬಾಲಪ್ಪನಿಗೆ ಚಂದ್ರಪ್ಪ ಮತ್ತು ನರಸಪ್ಪ ಇಬ್ಬರು ಮಕ್ಕಳು ಎಂದರೆ ಸರಿ. ಬಾಲಪ್ಪನಿಗೆ ಬಸಪ್ಪ , ತಮ್ಮಪ್ಪ ಮತ್ತು ಹನುಮಂತು 3 ಜನ ಸಹೋದರರು ಎಂದರೆ ಸರಿ. ಸದರಿ 4 ಜನ ಮಕ್ಕಳ ತಂದೆ ಸಣ್ಣಭೀಮಪ್ಪ ಎಂದರೆ ಸರಿ. ಸಣ್ಣಭೀಮಪ್ಪ ತಂದೆ ಹೆಸರು ಸಾಯಣ್ಣ ಎಂದರೆ ಸರಿ. ಸಾಯಣ್ಣನಿಗೆದೊಡ್ಡ ಭೀಮಪ್ಪ ಮತ್ತು ಸಣ್ಣ ಭೀಮಪ್ಪ ಇಬ್ಬರು ಮಕ್ಕಳು ಎಂದರೆ ಸರಿ. ದೊಡ್ಡ ಭೀಮಪ್ಪನ ಮಗ ಸಾಯಪ್ಪ ಎಂದರೆ ಸರಿ. ಸಾಯಪ್ಪ ನ ಮಗ ಹನುಮಪ್ಪ ಎಂದರೆ ಸರಿ. ಹನುಮಪ್ಪನಿಗೆ ನರಸಪ್ಪ ಮತ್ತು ಶರಣಪ್ಪ ಇಬ್ಬರು ಮಕ್ಕಳು ಎಂದರೆ ಸರಿ. ಶರಣಪ್ಪ ತೀರಿ ಹೋಗಿದ್ದಾರೆ ಎಂದರೆ ಸರಿ. ನರಸಪ್ಪ ನ ಹೆಂಡತಿ ಹೆಸರು ಪಾರ್ವತಮ್ಮ ಎಂದರೆ ಸರಿ. ಈ ದಾವೆಯನ್ನು ನರಸಪ್ಪನ ಹೆಂಡತಿ ಪಾರ್ವತಮ್ಮ ಸಲ್ಲಿಸಿದ್ದಾರೆ ಎಂದರೆ ಸರಿ.

ನರಸಪ್ಪನ ಭಾಗದ ಜಮೀನುಗಳಿಗೆ ವಾದಿ ವಾರಸುದಾರಳು ಎಂದರೆ ಸರಿಯಲ್ಲ. ಸರ್ವೆ ನಂ. 15 , 15 ಎಕರೆ 6 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ದ ದೊಡ್ಡ ಭೀಮಪ್ಪ ಮತ್ತು ಸಣ್ಣಭೆಮಪ್ಪ ನ ನಡುವೆ ಭಾಗ ಆಗಿತ್ತು ಎಂದರೆ ಸರಿ. ಸಣ್ಣಭೀಮಪ್ಪನ ಭಾಗದ ಜಮೀನನ್ನು ಬಾಲಪ್ಪ, ಬಸಪ್ಪ ಮತ್ತು ತಮ್ಮಪ್ಪ ಭಾಗ ಮಾಡಿಕೊಂಡಿದ್ದರು ಎಂದರೆ ಸರಿ. ಹನುಮಂತು ಅವಿವಾಹಿತರಾಗಿ ತೀರಿ ಹೋಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಾಲಪ್ಪನಿಗೆ ಬಂದಿದ್ದ ಜಮೀನನ್ನು ಚಂದ್ರಪ್ಪ ಮತ್ತು ನರಸಪ್ಪ ಹಂಚಿಕೊಂಡಿದ್ದಾರೆ ಎಂದರೆ ಸರಿ. ಚಂದ್ರಪ್ಪ ನ ಮಗ ಹನುಮಂತು ನನ್ನ ಗಂಡ ಎಂದರೆ ಸರಿ. ನನ್ನ ಗಂಡ ಹನುಮಂತುವಿನ ಭಾಗಕ್ಕೆ ಬಂದ ಜಮೀನು ಈಗ ನನಗೆ ಬಂದಿದೆ ಎಂದರೆ ಸರಿ. ನರಸಪ್ಪನ ಭಾಗದ ಜಮೀನು 1ನೇ ಪ್ರತಿವಾದಿ ಭಾಗಕ್ಕೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ದೊಡ್ಡ ಭೀಮಪ್ಪ ಮತ್ತು ಸಣ್ಣ ಭೀಮಪ್ಪ ಸಮ ಪಾಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ದೊಡ್ಡ ಬೀಮಪ್ಪ ನ ಭಾಗದ ಜಮೀನು ವಾದಿಗೆ ಬಂದಿದೆ ಎಂದರೆ ಗೊತ್ತಿಲ್ಲ. ಸಣಭೀಮಪ್ಪ ಜಮೀನನುಷ್ನ ನಾವು ಹಂಚಿಕೊಂಡಿದ್ದು ನನ್ನ ಕಬ್ಜಾದಲ್ಲಿದೆ ಎಂದರೆ ಸರಿ . ಭೀಮಪ್ಪನ

OS No. 29/2021

DW-1

ಭಾಗದ ಜಮೀನು ವಾದಿ ಸ್ವಾ ಧೀನಕ್ಕೆ ಬಂದಿದೆ ಎಂದರೆ ಸರಿಯಲ್ಲ, ವಾದಿ ಅವರ ಜಮೀನಿನಲ್ಲಿ ಕಬ್ಜಾದಲ್ಲಿದ್ದಾರೆ. ಸಣ್ಣಭೀಮಪ್ಪ ನ ಭಾಗದ 7 ಎಕರೆ 28 ಗುಂಟೆ ಜಮೀನನ್ನು ನಾವು ಹೆಂಚಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದೊಡ್ಡ ಭೀಮಪ್ಪನ ಭಾಗದ 7 ಎಕರೆ 23 ಗುಂಟೆಯಲ್ಲಿ ವಾದಿ ಕಬ್ಜಾದಲ್ಲಿದ್ದಾರೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನ ಕಬ್ಜಾದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಹಣಿಗಳಲ್ಲಿ ಇರುವ ಜಮೀನು ಮತ್ತು ವಾಸ್ತವಿಕ ಕಬ್ಜಾದಲ್ಲಿರುವ ಜಮೀನುಗಳು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ಕಬ್ಜಾ ಪ್ರಕಾರ ಪಹಣಿ ಇಲ್ಲದಿದ್ದರು ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ದಾವಾ ಸ್ವತ್ತಿನಲ್ಲಿ ಕಬ್ಜಾದಲ್ಲಿದ್ದರು, ಕಬ್ಜಾದಲ್ಲಿ ಇಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**